# MODEL QUESTION PAPER
# KANNADA-PAPER II

**ಮಾದರಿ ಪ್ರಶ್ನೆ ಪತ್ರಿಕೆ** **ಅಂಕಗಳು:40**

**ತರಗತಿ:IX** **ಕನ್ನಡ II** **ಸಮಯ:1 ಗಂಟೆ 30 ನಿಮಿಷ**

**ಸೂಚನೆಗಳು:**

- **ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳಲು ನಿಮಗೆ 15 ನಿಮಿಷ ಕಾಲಾವಕಾಶ ನೀಡಲಾಗಿದೆ.**
- **ಎಲ್ಲಾ ಪ್ರಶ್ನೆಗಳನ್ನು ಸಾವಧಾನವಾಗಿ ಓದಿರಿ.**
- **ಸೂಚನೆಗಳನ್ನು ಓದಿ ಅರ್ಥಮಾಡಿಕೊಂಡು ಕೊಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ.**

**1 ರಿಂದ 3 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ. 2*1=2**

1.ಕೆಳಗೆ ನೀಡಲಾದ ಕವನದ ಸಾಲುಗಳಲ್ಲಿ ಅಡಿಗೆರೆ ಎಳೆದ ಪದ ಯಾವ ಅರ್ಥವನ್ನು ಸೂಚಿಸುತ್ತದೆ.

ಎತ್ತರದ ಮಲೆಯ ಭುಜ, ಬಿತ್ತರದ ಬಯಲಿನೆದೆ

ಆರೋಗ್ಯ ಭಾಗ್ಯ ಧನಧಾನ್ಯ ಸಂಪತ್ತು.

(ಆಕಾರ ,ವಿಸ್ತಾರ, ವಿನ್ಯಾಸ ,ವಿಕಾಸ)

2.ಹಿರೇಮಗಳೂರು ಕಣ್ಣನ್ ಅವರು ಬರೆದ 'ಒಂದು ಮೂಸುಂಬೆ ಇನ್ನೊಂದು ಗೋಸುಂಬೆ' ಶೀರ್ಷಿಕೆಯ ವಿಶೇಷತೆಯನ್ನು ಬರೆಯಿರಿ.

(ಹಾಸ್ಯ,ವಿಡಂಬನೆ, ವೈಚಾರಿಕತೆ, ದುಗುಡ)

3. ಗಾರ್ಡನ್ -ಈ ಪದಕ್ಕೆ ಸಂವಾದಿಯಾದ ಕನ್ನಡ ಪದವನ್ನು ಬರೆಯಿರಿ.

**4 ರಿಂದ 7 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 3 ಪ್ರಶ್ನೆಗಳಿಗೆ ಉತ್ತರಿಸಿರಿ. 3*2=6**

4.ಕೆಳಗೆ ನೀಡಲಾದ ವಾಕ್ಯದಲ್ಲಿ ಅಡಿಗೆರ ಹಾಕಿದ ಪದವನ್ನು ಉಪಯೋಗಿಸಿಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.

ಸರ್ಕಸ್ ನಲ್ಲಿ ದಾರವನ್ನು ಹಿಡಿದು ಅತ್ತಿಂದಿತ್ತ ಜೋಲಾಡುತ್ತಾ ಎತ್ತರದಿಂದ ಕೆಳಕ್ಕೆ ಧುಮುಕುವುದನ್ನು ಕಂಡಾಗ ಮೈ ರೋಮಾಂಚನವಾಗುತ್ತದೆ.

5. ಕೆಳಗೆ ನೀಡಿರುವ ಸಂಯುಕ್ತ ವಾಕ್ಯವನ್ನು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

ದೂರದಿಂದ ಪ್ರಯಾಸ ಪಟ್ಟು ಬದರಿ ಕ್ಷೇತ್ರಕ್ಕೆ ಬರುವ ಭಕ್ತರು ಚಳಿಯಲ್ಲಿ ಬಿಸಿ ನೀರಿನ ಸ್ನಾನದ ಸುಖ ನೀಡುವ ಪ್ರಕೃತಿಯ ವಿಸ್ಮಯಕ್ಕೆ ಶರಣಾಗುತ್ತಾರೆ.

6. ಕೆಳಗೆ ನೀಡಲಾದ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿರಿ.

ಉತ್ತಮ ಜ್ಞಾನವನ್ನು ಸಂಪಾದಿಸಬೇಕಾದರೆ ಬೇರೆ ಬೇರೆ ಜನರ ಸಂಪರ್ಕ ಮಾಡಬೇಕು ಅವರ ಆಹಾರ ವ್ಯವಹಾರ ಅಭ್ಯಾಸಗಳನ್ನು ತಿಳಿಯಬೇಕು ಅಲ್ಲವೇ ಎಂದು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಕೇಳಿದರು.

7. 'ಮಂಗಲ ಗೀತ 'ಕವನಕ್ಕೆ ಈ ಶೀರ್ಷಿಕೆಯು ಹೇಗೆ ಒಪ್ಪುತ್ತದೆ ಎಂಬುದನ್ನು ಸಮರ್ಥಿಸಿ ಬರೆಯಿರಿ.

**8 ರಿಂದ 13 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 ಪ್ರಶ್ನೆಗಳಿಗೆ ಉತ್ತರಿಸಿರಿ. 5*4=20**

8. ಕೆಳಗೆ ಕೊಡಲಾದ 'ಮಂಗಲ ಗೀತ' ಕವನದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಬಾದಾಮಿ ಬನವಾಸಿ ಹಂಪೆ ಹಳೆಬೀಡುಗಳ

ಮೂಕವಾಣಿಗಳ ಸುಸ್ವಾಗತವ ಕೇಳು.

ಆಳಿದ ಸಾಮ್ರಾಜ್ಯಗಳ ಬಾಳದಿಹ ವೈಭವದ

ಕತೆ ಹೇಳಿ ಕಣ್ಣೊರಸಿ ಸವೆದುದಾಯುಷ್ಯ.

9. 'ಪ್ರವಾಸದಿಂದ ದೊರೆಯುವ ಪ್ರಯೋಜನಗಳು' ಎಂಬ ವಿಷಯದ ಕುರಿತು ಪತ್ರಿಕೆಗೆ ಕಳುಹಿಸಲು ಒಂದು ಕಿರು ಲೇಖನವನ್ನು ಬರೆಯಿರಿ.

© State Assessment Cell SCERT, Kerala

10. ಕೆಳಗೆ ನೀಡಿರುವ ಗದ್ಯಭಾಗವನ್ನು ಓದಿ ನಾಲ್ಕು ಪ್ರಶ್ನೆಗಳನ್ನು ತಯಾರಿಸಿರಿ.

ಯೋಗ ಮೂಲತಃ ಅತ್ಯಂತ ಪ್ರಾಚೀನ ಕಲೆ. ಇದು ಆರೋಗ್ಯಕರ ದೇಹದೊಳಗೆ ಆರೋಗ್ಯಕರ ಮನಸ್ಸನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಯೋಗ ಮಾನವ ದೇಹದ ದೈಹಿಕ, ಆಧ್ಯಾತ್ಮಿಕ ಮತ್ತು ಮಾನಸಿಕ ಸ್ಥಿತಿಯನ್ನು ಹೆಚ್ಚಿಸುತ್ತದೆ. 'ಯೋಗ 'ಎನ್ನುವ ಪದ ಸಂಸ್ಕೃತದ ಮೂಲ ಧಾತುವಾದ 'ಯುಜ್' ನಿಂದ ಬಂದಿದ್ದು ಇದು ಕೂಡಿಸು ಕೇಂದ್ರೀಕರಿಸು ಎನ್ನುವ ಅರ್ಥವನ್ನು ನೀಡುತ್ತದೆ. ಇಂತಹ ಅಮೂಲ್ಯ ಸಂಪತ್ತನ್ನು ಇಡೀ ಜಗತ್ತಿಗೆ ಪರಿಚಯಿಸಿದವರು ಪತಂಜಲಿ ಮಹರ್ಷಿ. ಯೋಗ ಕಲಿಕೆಯಿಂದ ಮಕ್ಕಳಲ್ಲಿ ವೈಚಾರಿಕತೆ ,ಭಾವನಾತ್ಮಕ ರಚನೆ ಮತ್ತು ಸೃಜನಶೀಲತೆಯನ್ನು ಬೆಳೆಸಬಹುದಾಗಿದೆ. ಸಂಕುಚಿತವಾದ ಅಹಂಕಾರ ತುಂಬಿದ ವ್ಯಕ್ತಿತ್ವವನ್ನು ವಿಶಾಲಗೊಳಿಸಿ ಉನ್ನತ ಸ್ಥಾನಕ್ಕೆ ಕರೆದೊಯ್ಯುತ್ತದೆ. ಹಾಗೆಯೇ ದೈಹಿಕವಾಗಿ ಸಕ್ರಿಯವಾಗಿ ಮಾಡುವ ಯೋಗ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಹಾಗೂ ಖಿನ್ನತೆಯ ಲಕ್ಷಣಗಳಿಗೂ ಪರಿಹಾರವನ್ನು ನೀಡುತ್ತದೆ.

11. 'ಒಂದು ಮೂಸುಂಬೆ ಇನ್ನೊಂದು ಗೋಸುಂಬೆ' ಪಾಠದ ಆಧಾರದಲ್ಲಿ ಭಾರತೀಯ ಸಂಸ್ಕೃತಿ ಎಂಬ ವಿಷಯದ ಕುರಿತು ಶಾಲೆಯ ಸಾಹಿತ್ಯ ಸಭೆಯಲ್ಲಿ ಮಂಡಿಸುವುದಕ್ಕಾಗಿ ಒಂದು ಲಿಖಿತ ಭಾಷಣವನ್ನು ತಯಾರಿಸಿರಿ.

12. 'ಭೂಲೋಕದ ಅಮರಾವತಿ ಶಿಮ್ಲಾ' ಈ ಪಾಠಭಾಗವನ್ನು ಓದಿದಿರಲ್ಲವೇ ?ಇದರ ಆಧಾರದಲ್ಲಿ 'ಶಿಮ್ಲಾ ಭೂಮಿಯ ಮೇಲಿನ ಸ್ವರ್ಗ' ಈ ಮಾತನ್ನು ಸಮರ್ಥಿಸಿ ಲೇಖನವನ್ನು ಬರೆಯಿರಿ.

13.'ಒಂದು ಮೂಸುಂಬೆ ಇನ್ನೊಂದು ಗೋಸುಂಬೆ' ಪಾಠದ ಆಧಾರದಲ್ಲಿ ದುಡಿಮೆಯ ಮಹತ್ವದ ಕುರಿತು ಟಿಪ್ಪಣಿಯನ್ನು ಬರೆಯಿರಿ.

**14 ರಿಂದ 16 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ. 2*6=12**

14.ನಿಮ್ಮ ಊರಿನಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳು ಇರುವುದಲ್ಲವೇ? ಅವುಗಳಲ್ಲಿ ಯಾವುದಾದರು ಒಂದು ಸ್ಥಳದ ವಿಶೇಷತೆ ,ಪರಿಚಯವನ್ನು ತಿಳಿಸುತ್ತಾ ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರ ಬರೆಯಿರಿ.

15. 'ಒಂದು ಮೂಸುಂಬೆ ಇನ್ನೊಂದು ಗೋಸುಂಬೆ 'ಪಾಠದ ಆಧಾರದಲ್ಲಿ ಸಂಸ್ಕೃತಿ ಅಂದು-ಇಂದು ಎಂಬ ವಿಷಯದ ಕುರಿತು ಪ್ರಬಂಧವನ್ನು ಬರೆಯಿರಿ.

16. 'ಮಂಗಳ ಗೀತ 'ಕವನದಲ್ಲಿ ಕವಿ ಕನ್ನಡ ನಾಡಿನ ಹಿರಿಮೆ ವಿಶಿಷ್ಟಗಳನ್ನು ಬಹಳ ಸೊಗಸಾಗಿ ವರ್ಣಿಸಿದ್ದಾರಲ್ಲವೇ ? ಅದೇ ರೀತಿಯ ಇನ್ನೊಂದು ಕವನವನ್ನು ಕೆಳಗೆ ನೀಡಲಾಗಿದೆ ಇದರ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**<u>ಕನ್ನಡ ನಾಡು</u>**

ನೋಡಿದು ನಮ್ಮಯ ಕನ್ನಡ ನಾಡು
ಅಂದದ ಚಂದದ ಗಂಧದ ಗೂಡು
ಒಲವು ಬಲವು ಉಕ್ಕುವ ನಾಡು
ಗೆಲುವು ನಲಿವು ಚಿಮ್ಮುವ ನಾಡು

ಥಳಥಳ ಹೊಳೆಯುವ ಗಣಿಗಳ ನಾಡು
ಜುಳುಜುಳು ಹರಿಯುವ ತೊರೆಗಳ ನಾಡು
ಮುಗಿಲನು ಮುಟ್ಟುವ ಗಿರಿಗಳ ನಾಡು
ಹಚ್ಚನೆ ಹಸುರಿನ ಬನಗಳ ಬೀಡು

ತ್ಯಾಗದ ಭೋಗದ ವೀರರ ನಾಡು
ರಸಿಕರ ಕೃಷಿಕರ ಶ್ರಮಿಕರ ನಾಡು
ತೆಂಗಿನ ಕಂಗಿನ ರಂಗಿನ ನಾಡು
ಸುಂದರ ಹವೆಯ ಬಂಧುರ ಬೀಡು
ಹೂವಿನ ಜೇನಿನ ಹೊನ್ನಿನ ನಾಡು

© State Assesment Cell SCERT, Kerala

ಕವಿಗಳ ಋಷಿಗಳ ಸಂತರ ನಾಡು
ವಿಧವಿಧ ಧರ್ಮದ ದೇವರ ಬೀಡು
ಬೆಚ್ಚನೆ ಬದುಕಿನ ತೌರಿದು ನೋಡು

ಬೇಲೂರು ಬೆಳ್ಗೊಳ ಹಂಪೆಯ ಶಿಲ್ಪದ
ಕಾವೇರಿ ತುಂಗೆಯ ಭದ್ರೆಯ ತಲ್ಪದ
ಶಾಂತಿಯ ಸಮತೆಯ ಮಮತೆಯ ನಾಡು
ದೇವರು ರಚಿಸಿದ ಸುಂದರ ನಾಡು

ಡಾ.ಎಚ್.ಜೆ ಲಕ್ಕಪ್ಪಗೌಡ

(ತೊರೆ-ನದಿ ಗಿರಿ-ಬೆಟ್ಟ ಬಂಧುರ-ಮಿತ್ರ)

© State Assesment Cell SCERT, Kerala